ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 56-2013

ಸಿ.ಡಬ್ಲ್ಯೂ-02
ಪಿ.ಡಬ್ಲ್ಯೂ-02

ಸಾಕ್ಷಿದಾರನ ಹೆಸರು :- ವೆಂಕಟೇಶ
ಗಂಡನ ಹೆಸರು :- ಹೊನ್ನಯ್ಯ
ವಯಸ್ಸು :- 48 ವರ್ಷ
ಉದ್ಯೋಗ :- ವ್ಯವಸಾಯ
ವಾಸ :- ದೊಡ್ಡಕೊಪ್ಪಲು

**ಸಾಕ್ಷಿಗೆ ದಿಃ 08.05.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಕಲಂ 299 ಅಡಿಯಲ್ಲಿ ಸಾಕ್ಷಿಯ ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಆರೋಪಿ ತೋರಿಸಿದ ಕೃತ್ಯ ನಡೆದ ಸ್ಥಳದ ಪಂಚನಾಮೆಗೆ ನನ್ನ ಸಹಿ ಇದ್ದು, ದಿಃ 09.02.2013 ರಂದು ಹುಲಿಯೂರದುರ್ಗ ಹಳೆವೂರು ರಸ್ತೆಯಲ್ಲಿರುವ ಹತ್ತಿಕಾಯಿ ಮರದ ಕೆಳಗೆ ಪೋಲಿಸರು ಪಂಚನಾಮೆ ಮಾಡಿದ್ದು, ಆ ದಿನ ನನ್ನ ಜೊತೆ ಚಾಸಾ-7 ಮತ್ತು 8 ಸಹ ಇದ್ದರು. ದಿಃ 30.06.2012 ರಂದು ನಾನು ಮರ ಕುಯಿಸುತ್ತಿದ್ದೆ, ಆ ದಿನವು ಆಳುಗಳಿಗೆ ಊಟ ತರಲೆಂದು ಹುಲಿಯೂರದುರ್ಗಕ್ಕೆ ಹೋಗಿದ್ದಾಗ ನನ್ನ ತಾಯಿ ವಡವೆ ಕಳೆದುಕೊಂಡು ಗಾಬರಿಯಾಗಿ ಓಡಾಡುತ್ತಿದ್ದರು. ನಾನು ಅವರಿಗೆ ವಿಚಾರಿಸಲಾಗಿ ಅವರು ನಡೆದ ವಿಷಯವನ್ನು ತಿಳಿಸಿರುತ್ತಾರೆ. ನಂತರ ನಾನು ನನ್ನ ಸೋದರ ಮಾವನಿಗೆ ಕರೆ ಮಾಡಿ ವಿಚಾರ ತಿಳಿಸಿದ್ದು, ಅವರು ಬಂದ ಬಳಿಕ ದೂರನ್ನು ನೀಡಿರುತ್ತೇವೆ. ಆ ದಿನ ನನ್ನ ತಾಯಿ ಒಂದು ಮಾಂಗಲ್ಯ ಸರ, ಓಲೆ, ಮಾಟಿ, ಬಂಗಾರದ ಬಳೆ ಹಾಕಿಕೊಂಡು ಹೋಗಿರುತ್ತಾರೆ. ನಂತರ ಪೊಲೀಸರು ಪುನಃ ನಮಗೆ ಕರೆ ಮಾಡಿ ಆರೋಪಿತರು ಸಿಕ್ಕಿರುವುದಾಗಿ ಹೇಳಿದ್ದು, ನಾನು ಮತ್ತು ನನ್ನ ತಾಯಿ, ಚಾಸಾ-7 ಮತ್ತು 8 ಹೋಗಿದ್ದೆವು.

ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. **ಮೂಲ ಪಂಚನಾಮೆ ಮೂಲ ಸಿಸಿ 43/2013 ಪ್ರಕರಣದಲ್ಲಿ ಇದ್ದು ಸದರಿ ಪ್ರಕರಣ ಈಗಾಗಲೇ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಕಳುಹಿಸಿರುವ ಕಾರಣ ದಾಖಲೆಗಳನ್ನು ಗುರುತಿಸಿರುವುದಿಲ್ಲ.**

ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಆರೋಪಿತರನ್ನು ತೋರಿಸಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಆ ಸಮಯದಲ್ಲಿ ಅವರ ಹೆಸರು ಮತ್ತು ವಿಳಾಸವನ್ನು ತಿಳಿಸಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.